# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 02.09.2011**

## ***ರಸ್ತೆ ನಾಮಕರಣ : ಸಾರ್ವಜನಿಕ ಆಕ್ಷೇಪಣೆಗೆ ಆಹ್ವಾನ***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ: 179, ಶಾಕಾಂಬರಿನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಜಯನಗರ 5ನೇ ಬಡಾವಣೆ 46ನೇ ಅಡ್ಡರಸ್ತೆ, 11ನೇ ಮತ್ತು 24ನೇ ಮುಖ್ಯರಸ್ತೆಯಲ್ಲಿರುವ ವೃತ್ತಕ್ಕೆ ***"ಶ್ರೀ ರಾಘವೇಂದ್ರಸ್ವಾಮಿ ಮಠ ವೃತ್ತ"*** ಎಂದು ನಾಮಕರಣ ಮಾಡಲು ದಿನಾಂಕ: 28.07.2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ನಿರ್ಣಯಿಸಲಾಗಿದೆ.

ಅದೇ ರೀತಿ ಪಾಲಿಕೆಯ ವಾರ್ಡ್ ಸಂಖ್ಯೆ: 179, ಶಾಕಾಂಬರಿನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ 7ನೇ ಅಡ್ಡರಸ್ತೆಗೆ ಜಯನಗರ 5ನೇ ಬಡಾವಣೆ 46ನೇ ಅಡ್ಡರಸ್ತೆ, 11ನೇ ಮತ್ತು 24ನೇ ಮುಖ್ಯರಸ್ತೆಯಲ್ಲಿರುವ ವೃತ್ತಕ್ಕೆ ***"ಶಾಕಾಂಬರಿ ದೇವಾಲಯ ರಸ್ತೆ"*** ಎಂದು ನಾಮಕರಣ ಮಾಡಲು ದಿನಾಂಕ: 28.07.2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ನಿರ್ಣಯಿಸಲಾಗಿದೆ.

ಇದಲ್ಲದೇ ಪಾಲಿಕೆಯ ವಾರ್ಡ್ ಸಂಖ್ಯೆ: 179, ಶಾಕಾಂಬರಿನಗರ ವಿಭಾಗದ ವ್ಯಾಪ್ತಿಯಲ್ಲಿ ಇರುವ 8ನೇ ಬ್ಲಾಕ್ 45ನೇ ಅಡ್ಡರಸ್ತೆ ನಡುವೆ ಇರುವ ರಸ್ತೆಗೆ ***"ಅಯೋಧ್ಯ ರಸ್ತೆ"*** ಎಂದು ನಾಮಕರಣ ಮಾಡಲು ದಿನಾಂಕ: 28.07.2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ನಿರ್ಣಯಿಸಲಾಗಿದೆ.

ಆದುದರಿಂದ ಸದರಿ ವಿಷಯಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಆಕ್ಷೇಪಣೆಗಳಿದ್ದಲ್ಲಿ ಈ ಪತ್ರಿಕಾ ಪ್ರಕಟಣೆ ಹೊರಡಿಸಲಾದ ದಿನಾಂಕದಿಂದ 30 ದಿನದೊಳಗೆ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ನರಸಿಂಹರಾಜ ಚೌಕ, ಬೆಂಗಳೂರು-02, ಇವರಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ತಿಳಿಸಲಾಗಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***<u>ಪತ್ರಿಕಾ ಪ್ರಕಟಣೆ</u>*** **ದಿನಾಂಕ: 02.09.2011**

ಪಾಲಿಕೆ ಆಯುಕ್ತರು ಇಂದು ಕೆಂಪಾಂಬುದಿ ಮತ್ತು ಕರಿತಿಮ್ಮೇನಹಳ್ಳಿ ಕೆರೆಗಳ ತಪಾಸಣೆ ಕೈಗೊಂಡು, ಕೆಂಪಾಂಬುದಿ ಕೆರೆಗೆ ಕೊಳಚೆ ನೀರು ಸೇರುವುದನ್ನು ನಿಲ್ಲಿಸಿ ಅದನ್ನು ಬೇರೆಡೆಗೆ ಹರಿಯುವಂತೆ ಮಾಡಲು ಪ್ರಗತಿಯಲ್ಲಿರುವ 15 ಮೀಟರ್ ಉದ್ದದ ಕಾಲುವೆ ನಿರ್ಮಾಣ ಕಾಮಗಾರಿಯನ್ನು ಬೇಗನೆ ಮುಗಿಸಿ, ಕೆರೆಯಲ್ಲಿ ಮಳೆ ನೀರು ಸಂಗ್ರಹಣೆ ಮಾಡುವಂತೆ ಕ್ರಮ ಜರುಗಿಸಲು ವಲಯ ಮುಖ್ಯ ಅಭಿಯಂತರರಿಗೆ ಸೂಚನೆ ನೀಡಿದರು.

ಕೆಂಪಾಂಬುದಿ ಕೆರೆಯ ಪಕ್ಕದಲ್ಲಿರುವ ಪಾಲಿಕೆಗೆ ಸೇರಿದ 5 ಎಕರೆ ಖಾಲಿ ಇರುವ ಜಾಗ ಅಭಿವೃದ್ಧಿಪಡಿಸದೆ ಬಹಳ ವರ್ಷಗಳಿಂದ ಹಾಗೆ ಉಳಿದಿದೆ. ಈ ಜಾಗದಲ್ಲಿ ವಿವಿಧ ಜಾತಿಯ ಸಸಿಗಳನ್ನು ನೆಟ್ಟು ಅದನ್ನು ವೃಕ್ಷವನವನ್ನಾಗಿ ಅಭಿವೃದ್ಧಿಪಡಿಸಲು ವಲಯ ಜಂಟಿ ಆಯುಕ್ತರಿಗೆ ತಿಳಿಸಿದರು.

ಕರಿತಿಮ್ಮೇನಹಳ್ಳಿ ಕೆರೆಯನ್ನು ಅಭಿವೃದ್ಧಿಪಡಿಸಿ, ಸುತ್ತಮುತ್ತಲಿನ ಪ್ರದೇಶದಲ್ಲಿ ಹರಿಯುವ ಮಳೆ ನೀರನ್ನು ಕೆರೆಯಲ್ಲಿ ಸಂಗ್ರಹಿಸುವುದರಿಂದ ತಗ್ಗುಪ್ರದೇಶದಲ್ಲಿ ಪ್ರವಾಹ ಉಂಟಾಗುವುದನ್ನು ತಡೆಯಬಹುದಾಗಿದೆ. ಆದ್ದರಿಂದ ಕೂಡಲೇ ಕೆರೆಯ ಸರ್ವೆ ಕಾರ್ಯ ಪ್ರಾರಂಭಿಸಿ, ಎಲ್ಲೆಗಳನ್ನು ಗುರುತಿಸಿ ಸುತ್ತಲು ತಂತಿಬೇಲಿ ನಿರ್ಮಿಸಲು ಸೂಚಿಸಿದ್ದಾರೆ.

ತದನಂತರ ಗಾಳಿ ಆಂಜನೇಯ ದೇವಸ್ಥಾನದ ಹತ್ತಿರ ವೃಷಭಾವತಿ ಕಣಿವೆಯಿಂದ ಹೂಳೆತ್ತುವ ಕಾರ್ಯದ ಪ್ರಗತಿ ಪರಿಶೀಲಿಸಿದರು. ಹೆಚ್ಚಿನ ಮಳೆಯಾದಾಗ ಪ್ರದೇಶದಲ್ಲಿ ಪ್ರವಾಹ ಉಂಟಾಗುವುದನ್ನು ತಪ್ಪಿಸಲು ಹೂಳೆತ್ತುವ ಕೆಲಸ ಸಮರ್ಪಕವಾಗಿ ನಿರ್ವಹಿಸಬೇಕಾಗಿದೆ. ಅವಶ್ಯಕತೆ ಇರುವಕಡೆ ಹೂಳೆತ್ತುವ ಕಾರ್ಯ ಮುಂದುವರೆಸಲು ಬೃಹತ್ ನೀರುಗಾಲುವೆ ಅಭಿಯಂತರರಿಗೆ ಸೂಚನೆ ನೀಡಿದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**